2

ದಂಪತಿಗಳ
ಹಕ್ಕು ಕರ್ತವ್ಯಗಳು

حقوق الزوجين



مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಗಂಡನಿಗೆ ಹೆಂಡತಿಯ ಮೇಲೆ ಮತ್ತು ಹೆಂಡತಿಗೆ ಗಂಡನ ಮೇಲೆ ಕೆಲವು ಹಕ್ಕು–ಕರ್ತವ್ಯಗಳಿವೆ-ಯೆಂದು ಇಸ್ಲಾಮ್ ಹೇಳುತ್ತದೆ. ಆ ಹಕ್ಕು–ಕರ್ತವ್ಯಗಳಲ್ಲಿ ಕೆಲವನ್ನು ಅವರು ಸಮಾನವಾಗಿ ಹಂಚಿಕೊಳ್ಳುತ್ತಾರೆ. ದಂಪತಿಗಳು ಪರಸ್ಪರ ನೆರವೇರಿಸಬೇಕೆಂದು ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಹೇಳಿರುವ ಹಕ್ಕು–ಕರ್ತವ್ಯಗಳನ್ನು ವಿದ್ವಾಂಸರ ಅಭಿಪ್ರಾಯಗಳ ಉಲ್ಲೇಖದೊಂದಿಗೆ ಇಲ್ಲಿ ವಿವರಿಸುತ್ತೇವೆ.

ಹೆಂಡತಿಗೆ ಮಾತ್ರ ಇರುವ ಹಕ್ಕುಗಳು:

ಹೆಂಡತಿಗೆ ಗಂಡ ನೆರವೇರಿಸಿಕೊಡಬೇಕಾದ ಆರ್ಥಿಕ ಮತ್ತು ಆರ್ಥಿಕೇತರ ಹಕ್ಕುಗಳಿವೆ. ಆರ್ಥಿಕ ಹಕ್ಕುಗಳು ಎಂದರೆ ಮಹ್ರ್ (ವಧುದಕ್ಷಿಣೆ), ಆಹಾರ, ಬಟ್ಟೆ–ಬರೆ ಮತ್ತು ವಸತಿ. ಆರ್ಥಿಕವಲ್ಲದ ಹಕ್ಕುಗಳು ಎಂದರೆ ಹೆಂ-ಡತಿಯರ ಮಧ್ಯೆ ನ್ಯಾಯಪಾಲಿಸುವುದು, ಅವರೊಡನೆ

ಸಭ್ಯವಾಗಿ ಮತ್ತು ಉತ್ತಮ ರೀತಿಯಲ್ಲಿ ವರ್ತಿಸುವುದು ಹಾಗೂ ಅವರೊಡನೆ ಅನಾಗರಿಕವಾಗಿ, ಹಾನಿಕರವಾಗಿ ವರ್ತಿಸದಿರುವುದು.

1. ಆರ್ಥಿಕ ಹಕ್ಕುಗಳು:

ಎ. ಮಹ್ರ್ (ವಧುದಕ್ಷಿಣೆ): ಇದು ವಿವಾಹ ಕರಾರಿನ ಸಂದರ್ಭ ಅಥವಾ ವಿವಾಹದ ಸಂದರ್ಭ ಗಂಡ ಹೆಂಡತಿಗೆ ಕೊಡಬೇಕಾದ ನಿಶ್ಚಿತ ಮೊತ್ತ. ವಧುದಕ್ಷಿಣೆ ಕೊಡುವುದು ಕಡ್ಡಾಯ. ಅದು ರೂಪಾಯಿಯೋ, ಪುಸ್ತಕವೋ, ಚಿನ್ನವೋ, ಬೆಳ್ಳಿಯೋ ಅಥವಾ ಇತರ ಯಾವುದೇ ವಸ್ತುವೂ ಆಗಬಹುದು.

ಅಲ್ಲಾಹು ಹೇಳುತ್ತಾನೆ: “ಮಹಿಳೆಯರಿಗೆ ಅವರ ವಧುದಕ್ಷಿಣೆಯನ್ನು ಆತ್ಮಸಂತೋಷದಿಂದ ಕೊಡಿ.” (ಕುರ್‌ಆನ್ 4:4)

ವಧುದಕ್ಷಿಣೆ ವಿವಾಹ ಕರಾರಿನ ಗಂಭೀರತೆ ಮತ್ತು

ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಅದು ಮಹಿಳೆಗೆ ನೀಡುವ ಗೌರವವಾಗಿದೆ. ಬಹುಪಾಲು ವಿದ್ವಾಂಸರ ಅಭಿಪ್ರಾಯ ಪ್ರಕಾರ ವಧುದಕ್ಷಿಣೆ ವಿವಾಹ ಕರಾರಿನ ಪ್ರಮುಖ ಭಾಗವಲ್ಲ. ಬದಲಾಗಿ ಅದು ವಿವಾಹ ಕರಾರಿನ ಪರಿಣಾಮಗಳಲ್ಲೊಂದು ಮಾತ್ರ. ಬಹುಪಾಲು ವಿದ್ವಾಂಸರ ಅಭಿಪ್ರಾಯ ಪ್ರಕಾರ ವಿವಾಹ ಕರಾರಿನಲ್ಲಿ ವಧುದಕ್ಷಿಣೆಯನ್ನು ನಮೂದಿಸದಿದ್ದರೂ ವಿವಾಹ ಕರಾರು ಸಿಂಧುವಾಗುತ್ತದೆ.

ಅಲ್ಲಾಹು ಹೇಳುತ್ತಾನೆ: “ನೀವು ನಿಮ್ಮ ಹೆಂಡತಿಯರನ್ನು ಸ್ಪರ್ಶಿಸುವುದಕ್ಕೆ ಅಥವಾ ಅವರಿಗೆ ವಧುದಕ್ಷಿಣೆ ನಿಶ್ಚಯಿಸುವುದಕ್ಕೆ ಮುಂಚೆಯೇ ವಿಚ್ಛೇದನ ನೀಡಿದರೆ ಅದರಲ್ಲಿ ದೋಷವಿಲ್ಲ.” (ಕುರ್‌ಆನ್ 2:236)

ಪ್ರಸ್ತಕ್ಕೆ ಮೊದಲೇ ಅಥವಾ ವಧುದಕ್ಷಿಣೆ ನಿಶ್ಚಯಿಸುವುದಕ್ಕೆ ಮೊದಲೇ ವಿಚ್ಛೇದನ ಮಾಡಬಹುದು ಎಂಬ ಅಂಶವು ವಿವಾಹ ಕರಾರಿನಲ್ಲಿ ವಧುದಕ್ಷಿಣೆಯನ್ನು

ನಮೂದಿಸುವುದು ಕಡ್ಡಾಯವಲ್ಲವೆಂದು ಸೂಚಿಸುತ್ತ-ದೆ. ಅದನ್ನು ನಮೂದಿಸಿದ್ದರೂ ಅದನ್ನು ಕೊಡುವುದು ಕಡ್ಡಾಯವಾಗಿದೆ. ನಮೂದಿಸದಿದ್ದರೆ ಅವಳ ಸ್ಥಾನ-ಮಾನಕ್ಕೆ ಹೊಂದುವ ಇತರ ಮಹಿಳೆಯರಿಗೆ ಸಾಮಾ-ನ್ಯವಾಗಿ ನೀಡಲಾಗುವ ವಧುದಕ್ಷಿಣೆಯನ್ನು ಇವಳಿಗೂ ಕೊಡಬೇಕು.

ಬಿ. ಖರ್ಚು: ಹೆಂಡತಿಯ ಖರ್ಚು ನೋಡಿಕೊಳ್ಳು-ವುದು ಕಡ್ಡಾಯವೆಂಬ ವಿಷಯದಲ್ಲಿ ವಿದ್ವಾಂಸರಿಗೆ ಒಮ್ಮತಾಭಿಪ್ರಾಯವಿದೆ. ಆದರೆ ಹೆಂಡತಿ ಗಂಡನಿಗೆ ಲೈಂಗಿಕ ಸಂತೃಪ್ತಿ ನೀಡಿದರೆ ಮಾತ್ರ. ಆಕೆ ನಿರಾಕರಿಸಿ-ದರೆ, ಅಥವಾ ಪ್ರತಿಭಟಿಸಿದರೆ ಖರ್ಚು ಮಾಡುವುದು ಕಡ್ಡಾಯವಿಲ್ಲ.

ಖರ್ಚು ನೋಡಿಕೊಳ್ಳುವುದು ಕಡ್ಡಾಯ ಏಕೆಂದರೆ ವಿವಾಹ ಕರಾರಿನ ಪ್ರಕಾರ ಆಕೆ ಅವನಿಗೆ ಮಾತ್ರ ಸೀಮಿತ. ಅವನ ಅನುಮತಿಯಿಲ್ಲದೆ ಆಕೆ ಮನೆಯಿಂದ

ಹೊರಹೋಗುವಂತಿಲ್ಲ. ಆದ್ದರಿಂದ ಆಕೆಗೆ ಖರ್ಚು ಮಾಡುವುದು ಮತ್ತು ಆಕೆಯ ಆವಶ್ಯಕತೆಗಳನ್ನು ಪೂರೈಸಿ ಕೊಡುವುದು ಗಂಡನಿಗೆ ಕಡ್ಡಾಯ. ಖರ್ಚು ಮಾಡುವುದು ಎಂದರೆ ಆಕೆಗೆ ಬೇಕಾದ ಆಹಾರ, ಬಟ್ಟೆ-ಬರೆ, ವಸತಿ ಸೌಕರ್ಯ ಮುಂತಾದವುಗಳನ್ನು ಒದಗಿ-ಸುವುದು. ಅವಳು ಶ್ರೀಮಂತೆಯಾಗಿದ್ದರೂ ಸಹ ಗಂಡ ತನ್ನ ಸಂಪಾದನೆಯಿಂದಲೇ ಇವುಗಳನ್ನು ಕೊಡುವುದು ಕಡ್ಡಾಯವಾಗಿದೆ.

ಅಲ್ಲಾಹು ಹೇಳುತ್ತಾನೆ: "ಶಿಶುವಿನ ತಂದೆ ಆಕೆಗೆ (ಶಿಶುವಿನ ತಾಯಿಗೆ) ಬೇಕಾದ ಆಹಾರ, ಬಟ್ಟೆಬರೆಗಳ-ನ್ನು ಉಚಿತ ಪ್ರಮಾಣದಲ್ಲಿ ಕಡ್ಡಾಯವಾಗಿ ನೀಡಬೇಕು." (ಕುರ್‌ಆನ್ 2:233)

"ಶ್ರೀಮಂತರು ಅವರ ಸ್ಥಿತಿಗೆ ಅನುಸಾರವಾಗಿ ಖರ್ಚು ಮಾಡಬೇಕು ಮತ್ತು ಯಾರ ಉಪಜೀವನ ಮಾರ್ಗವು ಸಂಕುಚಿತವಾಗಿದೆಯೋ ಅವರು ಅಲ್ಲಾಹು ಅವರಿಗೆ

ಒದಗಿಸಿದವುಗಳಿಂದ ಖರ್ಚು ಮಾಡಬೇಕು." (ಕುರ್‌ಆನ್ 65:7)

ಆಯಿಶಾ(رضي الله عنها) ಹೇಳುತ್ತಾರೆ: ಒಮ್ಮೆ ಅಬೂ ಸುಫ್ಯಾನರ ಹೆಂಡತಿ ಹಿಂದ್ ಬಿನ್ತ್ ಉತ್ಬ ಪ್ರವಾದಿ(ﷺ) ಯವರ ಬಳಿ ಬಂದು ಹೇಳಿದರು: "ಓ ಪ್ರವಾದಿಯವರೇ, ಅಬೂ ಸುಫ್ಯಾನ್ ಜಿಪುಣ. ಅವನು ನನಗೆ ಮತ್ತು ನನ್ನ ಮಕ್ಕಳಿಗೆ ಸರಿಯಾಗಿ ಖರ್ಚು ಮಾಡುವುದಿಲ್ಲ. ಆದ್ದರಿಂದ ನಾನು ಅವನಿಗೆ ಗೊತ್ತಿಲ್ಲದೆ ಅವನ ಜೇಬಿನಿಂದ ದುಡ್ಡು ತೆಗೆಯುತ್ತೇನೆ. ಇದು ತಪ್ಪೇ?"

ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ನೀನು ತೆಗೆಯುವುದು ಉಚಿತ ಪ್ರಮಾಣದಲ್ಲಿದ್ದರೆ, ನಿನಗೆ ಮತ್ತು ನಿನ್ನ ಮಕ್ಕಳಿಗೆ ಸಾಕಾಗುವಷ್ಟು ಮಾತ್ರವಾಗಿದ್ದರೆ ತಪ್ಪಿಲ್ಲ." (ಅಲ್‌ಬುಖಾರಿ 5049, ಮುಸ್ಲಿಂ 1714)

ಜಾಬಿರ್(رضي الله عنه) ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ)

ರು ತಮ್ಮ ವಿದಾಯ ಭಾಷಣದಲ್ಲಿ ಹೇಳಿದರು: "ಮಹಿಳೆಯರ ವಿಷಯದಲ್ಲಿ ನೀವು ಅಲ್ಲಾಹನನ್ನು ಭಯಪಡಿರಿ. ನೀವು ಅವರನ್ನು ಪಡೆದಿರುವುದು ಅಲ್ಲಾಹನೊಂದಿಗೆ ಮಾಡಿದ ಕರಾರಿನ ಮೂಲಕ. ನಿಮಗೆ ಅವರ ಗುಹ್ಯಾಂಗವು ಸಮ್ಮತವಾಗಿರುವುದು ಅಲ್ಲಾಹನ ವಚನಗಳ ಮೂಲಕ. ನಿಮಗೂ ಅವರ ಮೇಲೆ ಹಕ್ಕುಗಳಿವೆ. ನೀವು ಇಷ್ಟಪಡದ ಯಾರನ್ನೂ ಅವರು ನಿಮ್ಮ ಮನೆಗೆ ಸೇರಿಸಬಾರದು. ಅವರು ಹಾಗೆ ಮಾಡಿದರೆ ಅವರನ್ನು ದಂಡಿಸಬಹುದು. ಆದರೆ ಕಠೋರವಾಗಿಯಲ್ಲ. ಅವರ ಹಕ್ಕುಗಳು ಏನೆಂದರೆ ನೀವು ಅವರಿಗೆ ಆಹಾರ ಮತ್ತು ಬಟ್ಟೆಬರೆಗಳನ್ನು ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಉಚಿತ ರೀತಿಯಲ್ಲಿ ನೀಡುವುದು." (ಮುಸ್ಲಿಂ 1218)

ಸಿ. ವಸತಿ: ಇದು ಕೂಡ ಹೆಂಡತಿಯ ಹಕ್ಕು. ಅಂದರೆ ಗಂಡ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಹೆಂಡತಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಬೇಕು.

ಅಲ್ಲಾಹು ಹೇಳುತ್ತಾನೆ: “ನೀವು ವಾಸವಾಗಿರುವ ಮನೆಯಲ್ಲೇ ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅವರನ್ನೂ (ವಿಚ್ಛೇದಿತ ಹೆಂಡತಿಯನ್ನೂ) ವಾಸ ಮಾಡಿಸಿರಿ.” (ಕುರ್‌ಆನ್ 65:6)

2. ಆರ್ಥಿಕೇತರ ಹಕ್ಕುಗಳು:

ಎ. ಸಮಾನ ನ್ಯಾಯ: ಗಂಡನಿಗೆ ಒಂದಕ್ಕಿಂತ ಹೆಚ್ಚು ಹೆಂಡತಿಯಿದ್ದರೆ ಅವರೆಲ್ಲರನ್ನೂ ಸಮಾನವಾಗಿ ನೋಡಿಕೊಳ್ಳಬೇಕು. ಅವರ ನಡುವೆ ನ್ಯಾಯ ಪಾಲಿಸಬೇಕು. ಅವರ ನಡುವೆ ಪಕ್ಷಪಾತ ಮಾಡಬಾರದು.

ಬಿ. ಸೌಮ್ಯ ವರ್ತನೆ: ಗಂಡ ಹೆಂಡತಿಯೊಂದಿಗೆ ಉತ್ತಮ ಗುಣ ಪ್ರದರ್ಶಿಸಬೇಕು. ಸೌಮ್ಯವಾಗಿ ವರ್ತಿಸಬೇಕು. ಅವಳನ್ನು ಸಂತೋಷಪಡಿಸಬೇಕು. ಅವಳ ಬೇಕು–ಬೇಡಗಳನ್ನು ವಿಚಾರಿಸಬೇಕು. ಅವಳು ಸಂತೋಷವಾಗಿರುವಂತೆ ನೋಡಿಕೊಳ್ಳಬೇಕು.

ಅಲ್ಲಾಹು ಹೇಳುತ್ತಾನೆ: "ಅವರೊಂದಿಗೆ ಉತ್ತಮ ರೀತಿ-ಯಲ್ಲಿ ವರ್ತಿಸಿರಿ." (ಕುರ್‌ಆನ್ 4:19)

"ಅವರಿಗೆ (ಗಂಡಂದಿರಿಗೆ) ಹೆಂಡತಿಯರ ಮೇಲೆ ಹಕ್ಕುಗ-ಳಿರುವಂತೆ ಅವರಿಗೂ (ಹೆಂಡತಿಯರಿಗೂ) ಗಂಡಂದಿರ ಮೇಲೆ ಹಕ್ಕುಗಳಿವೆ." (ಕುರ್‌ಆನ್ 2:228)

ಅಬೂ ಹುರೈರ(رضي الله عنه) ರಿಂದ ವರದಿ: ಪ್ರವಾದಿ ಮುಹ-ಮ್ಮದ್(ﷺ) ರು ಹೇಳಿದರು: "ನೀವು ಅವರೊಂದಿ-ಗೆ ಸೌಮ್ಯವಾಗಿ ವರ್ತಿಸಿರಿ." (ಅಲ್‌ಬುಖಾರಿ 3153, ಮುಸ್ಲಿಂ 1468)

ಝೈನಬ್ ಬಿನ್ತ್ ಅಬೀ ಸಲಮಾ(رضي الله عنها) ರಿಂದ ವರದಿ: ಪ್ರವಾದಿಯವರ ಮಡದಿ ಉಮ್ಮು ಸಲಮಾ ಹೇಳುತ್ತಾ-ರೆ: "ಒಮ್ಮೆ ನಾನು ಪ್ರವಾದಿಯವರೊಡನೆ(ﷺ) ಒಂದೇ ಕಂಬಳಿಯಲ್ಲಿ ಮಲಗಿದ್ದೆ. ಆಗ ನನಗೆ ಮುಟ್ಟಾಯಿತು. ನಾನು ಮೆಲ್ಲಗೆ ಎದ್ದು ಮುಟ್ಟಿನ ಸಂದರ್ಭ ಧರಿಸುವ

ಬಟ್ಟೆಯನ್ನು ತೊಟ್ಟೆ. ಇದನ್ನು ಕಂಡು ಪ್ರವಾದಿಯವರು(ﷺ) ಕೇಳಿದರು: "ನಿನಗೆ ಮುಟ್ಟಾಯಿತೇ?" ನಾನು ಹೌದೆಂದು ಹೇಳಿದೆ. ಆಗ ಅವರು ನನ್ನನ್ನು ಕರೆದು ಅವರೊಡನೆ ಅದೇ ಕಂಬಳಿಯೊಳಗೆ ಮಲಗಿಸಿದರು."

ಉಮ್ಮು ಸಲಮಾ ಮುಂದುವರಿದು ಹೇಳುತ್ತಾರೆ: "ಅವರು ಉಪವಾಸವಿದ್ದಾಗಲೂ ನನ್ನನ್ನು ಚುಂಬಿಸುತ್ತಿದ್ದರು. ಜನಾಬತ್ತಿನ ಸಂದರ್ಭ ನಾವಿಬ್ಬರು ಒಂದೇ ಪಾತ್ರೆಯಲ್ಲಿ ಒಟ್ಟಿಗೆ ಮೀಯುತ್ತಿದ್ದೆವು." (ಅಲ್‌ಬುಖಾರಿ 316, ಮುಸ್ಲಿಂ 296)

ಸಿ. ಕಿರುಕುಳ ಕೊಡಬಾರದು: ಇದು ಇಸ್ಲಾಮಿನ ಮೂಲ ನಿಯಮಗಳಲ್ಲೊಂದು. ಹೊರಗಿನ ಜನರಿಗೆ ಹಿಂಸೆ ನೀಡುವುದು ಇಸ್ಲಾಮಿನ ಪ್ರಕಾರ ನಿಷಿದ್ಧವಾಗಿದೆ. ಹೀಗಿರುವಾಗ ಸ್ವಂತ ಹೆಂಡತಿಯನ್ನು ಹಿಂಸಿಸುವುದು ಅದಕ್ಕಿಂತಲೂ ಘೋರ ನಿಷಿದ್ದ ಕೃತ್ಯವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಉಬಾದ ಬಿನ್ ಸಾಮಿತ್(رضي الله عنه) ರಿಂದ ವರದಿ:

ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ನೀವು ಯಾರಿಗೂ ಕಿರುಕುಳ ಕೊಡಬಾರದು. ಯಾರಿಂದಲೂ ಕಿರುಕುಳ ಅನುಭವಿಸುವಂತಾಗಬಾರದು." (ಇಬ್ನ್ ಮಾಜ 2340)

ಗಂಡನ ಹಕ್ಕುಗಳು:

ಅಲ್ಲಾಹು ಹೇಳುತ್ತಾನೆ: "ಅವರಿಗೆ (ಗಂಡಂದಿರಿಗೆ) ಹೆಂಡತಿಯರ ಮೇಲೆ ಹಕ್ಕುಗಳಿರುವಂತೆ ಅವರಿಗೂ (ಹೆಂಡತಿಯರಿಗೂ) ಗಂಡಂದಿರ ಮೇಲೆ ಹಕ್ಕುಗಳಿವೆ. ಆದರೆ ಗಂಡಂದಿರಿಗೆ ಹೆಂಡತಿಯರ ಮೇಲೆ ಒಂದು ಹೆಚ್ಚಿನ ಪದವಿಯಿದೆ." (ಕುರ್‌ಆನ್ 2:228)

ವಿವಾಹದ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಗಂಡನಿಗೆ ಹೆಂಡತಿಯ ಮೇಲೆ ಕೆಲವು ಆದ್ಯತೆಗಳಿವೆ.

ಎ. ವಿಧೇಯತೆ: ಅಲ್ಲಾಹು ಪುರುಷರನ್ನು ಮಹಿಳೆಯರ ಸಂರಕ್ಷಕರನ್ನಾಗಿ ಮಾಡಿದ್ದಾನೆ. ಅವರಿಗೆ ವಿದ್ಯಾಭ್ಯಾಸ

ನೀಡುವುದು, ಆದೇಶ ನಿರ್ದೇಶನಗಳನ್ನು ನೀಡುವುದು, ಆರೈಕೆ ಮಾಡುವುದು ಪುರುಷರ ಕರ್ತವ್ಯ. ಅಲ್ಲಾಹು ಪುರುಷರಿಗೆ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನು ನೀಡಿರುವುದು ಮತ್ತು ಆರ್ಥಿಕ ಬಾಧ್ಯತೆಯನ್ನು ಪುರುಷರ ಮೇಲೆ ಹೇರಿರುವುದೇ ಇದಕ್ಕೆ ಕಾರಣ.

ಅಲ್ಲಾಹು ಹೇಳುತ್ತಾನೆ: "ಪುರುಷರು ಮಹಿಳೆಯರ ಸಂರಕ್ಷಕರು. ಅಲ್ಲಾಹು ಅವರಲ್ಲೊಬ್ಬರಿಗೆ ಇನ್ನೊಬ್ಬರಿಗಿಂತ ಹೆಚ್ಚು ಶ್ರೇಷ್ಠತೆ ನೀಡಿರುವುದು ಮತ್ತು ಅವರು (ಪುರುಷರು) ತಮ್ಮ ಸಂಪತ್ತಿನಿಂದ ಖರ್ಚು ಮಾಡುವುದೇ ಇದಕ್ಕೆ ಕಾರಣ." (ಕುರ್‌ಆನ್ 4:34)

ಅಲೀ ಬಿನ್ ಅಬೀ ತಲ್ಹ ರವರು ಇಬ್ನ್ ಅಬ್ಬಾಸ್(ﷺ) ರಿಂದ ವರದಿ ಮಾಡುತ್ತಾರೆ: "ಪುರುಷರು ಮಹಿಳೆಯರ ಸಂರಕ್ಷಕರು ಎಂದರೆ ಪುರುಷರಿಗೆ ಅವರ ಮೇಲೆ ಅಧಿಕಾರವಿದೆ. ಅಲ್ಲಾಹು ಆಕೆಯ ಮೇಲೆ ಕಡ್ಡಾಯಗೊಳಿಸಿದ ವಿಧೇಯತೆಯ ವಿಷಯದಲ್ಲಿ ಆಕೆ ಅವನನ್ನು ಅನುಸರಿ-

ಸಬೇಕು. ಅವನ ಮಕ್ಕಳು ಮರಿಗಳನ್ನು ಚೆನ್ನಾಗಿ ನೋಡಿಕೊಳ್ಳುವ ಮೂಲಕ ಮತ್ತು ಅವನ ಸಂಪತ್ತನ್ನು ಸಂರಕ್ಷಿಸುವ ಮೂಲಕ ಅವನಿಗೆ ವಿಧೇಯಳಾಗಿರಬೇಕು."

ಬಿ. ತೃಪ್ತಿಪಡಿಸುವುದು: ಗಂಡನ ಇನ್ನೊಂದು ಹಕ್ಕು ಏನೆಂದರೆ ಹೆಂಡತಿ ಅವನನ್ನು ಲೈಂಗಿಕವಾಗಿ ತೃಪ್ತಿಪಡಿಸಬೇಕು. ಒಬ್ಬ ವ್ಯಕ್ತಿ ಒಬ್ಬಾಕೆ ಮಹಿಳೆಯನ್ನು ವಿವಾಹವಾಗಿ ಆಕೆಗೆ ಲೈಂಗಿಕ ಶಕ್ತಿಯಿದ್ದರೆ ವಿವಾಹ ಕರಾರಿನ ಪ್ರಕಾರ ಆತ ಕರೆದಾಗಲೆಲ್ಲ ಅವಳು ಅವನನ್ನು ತೃಪ್ತಿಪಡಿಸಬೇಕು. ಆತ ಆಕೆಗೆ ಮಹ್ರ್ (ವಧುದಕ್ಷಿಣೆ) ನೀಡಿದ ಬಳಿಕವೂ ಆಕೆ ಅವನನ್ನು ತೃಪ್ತಿಪಡಿಸಲು ಹಿಂಜರಿದರೆ ಅಥವಾ ನಿರಾಕರಿಸಿದರೆ, ಅಥವಾ ಆತನ ಕರೆಗೆ ಸರಿಯಾಗಿ ಸ್ಪಂದಿಸದಿದ್ದರೆ ಆಕೆಯ ವರ್ತನೆಯನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಅದೊಂದು ಮಹಾ ಪಾಪವೂ ಆಗಿದೆ. ಆದರೆ ಮುಟ್ಟು, ಕಡ್ಡಾಯ ಉಪವಾಸ, ಕಾಯಿಲೆ ಮುಂತಾದ ಸಂದರ್ಭಗಳಲ್ಲಿ

ಆಕೆಗೆ ವಿನಾಯಿತಿಯಿದೆ.

ಅಬೂ ಹುರೈರ(﵁) ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ಒಬ್ಬ ಗಂಡ ತನ್ನ ಹೆಂಡತಿಯನ್ನು ಹಾಸಿಗೆಗೆ ಕರೆದಾಗ ಆಕೆ ನಿರಾಕರಿಸಿದ ಕಾರಣ ಆತನೇನಾದರೂ ಸಿಟ್ಟಿನಿಂದಲೇ ಮಲಗಿದರೆ, ಬೆಳಗಾಗುವ ತನಕ ಮಲಕ್‌ಗಳು (ದೇವದೂತರು) ಆಕೆಯನ್ನು ಶಪಿಸುತ್ತಿರುವರು." (ಅಲ್‌ಬುಖಾರಿ 3065, ಮುಸ್ಲಿಂ 1436)

ಸಿ. ಇಷ್ಟವಿಲ್ಲದವರನ್ನು ಮನೆಗೆ ಸೇರಿಸಬಾರದು: ಅಬೂ ಹುರೈರ(﵁) ರಿಂದ ವರದಿ: ಪ್ರವಾದಿ ಮುಹಮ್ಮದ್(ﷺ) ರು ಹೇಳಿದರು: "ಗಂಡ ಬದುಕಿದ್ದರೆ ಆತನ ಒಪ್ಪಿಗೆಯಿಲ್ಲದೆ ಹೆಂಡತಿ ಉಪವಾಸ ಆಚರಿಸಬಾರದು. ಗಂಡನ ಅನುಮತಿಯಿಲ್ಲದೆ ಯಾರನ್ನೂ ಅವನ ಮನೆಗೆ ಸೇರಿಸಬಾರದು." (ಅಲ್‌ಬುಖಾರಿ 4899 ಮುಸ್ಲಿಂ 1026)

ಡಿ. ಮನೆಯಿಂದ ಹೊರಹೋಗಬಾರದು: ಗಂಡನ

ಒಪ್ಪಿಗೆಯಿಲ್ಲದೆ ಹೆಂಡತಿ ಮನೆಯಿಂದ ಹೊರಹೋಗ-ಬಾರದು.

ಇ. ದಂಡಿಸುವ ಹಕ್ಕು: ಹೆಂಡತಿ ಅವಿಧೇಯತೆ ತೋರಿಸಿ-ದರೆ ಅವಳನ್ನು ದಂಡಿಸುವ ಹಕ್ಕು ಗಂಡನಿಗಿದೆ. ಆದರೆ ಇದು ಧರ್ಮಸಮ್ಮತವಾದ ವಿಷಯಗಳಲ್ಲಿ ಮಾತ್ರ. ನಿಷಿದ್ಧ ವಿಷಯಗಳಲ್ಲಿ ಹೆಂಡತಿ ಗಂಡನನ್ನು ಯಾವತ್ತಿಗೂ ಅನು-ಸರಿಸಬಾರದು.

ಅಲ್ಲಾಹು ಹೇಳುತ್ತಾನೆ: "ಓ ಸತ್ಯವಿಶ್ವಾಸಿಗಳೇ, ನೀವು ನಿಮ್ಮನ್ನು ಮತ್ತು ನಿಮ್ಮ ಕುಟುಂಬದವರನ್ನು ನರಕಾಗ್ನಿ-ಯಿಂದ ರಕ್ಷಿಸಿರಿ. ಅದರ ಇಂಧನವು ಮನುಷ್ಯರು ಮತ್ತು ಕಲ್ಲುಗಳಾಗಿವೆ." (ಕುರ್‌ಆನ್ 66:6)

ಎಫ್. ಸೇವೆ: ಹೆಂಡತಿ ಗಂಡನ ಸೇವೆ ಮಾಡಬೇಕು. ಇದಕ್ಕೆ ಅನೇಕ ಪುರಾವೆಗಳಿವೆ. ಕೆಲವನ್ನು ಈಗಾಗಲೇ ನೀಡಲಾಗಿದೆ. ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯ

ಹೇಳುತ್ತಾರೆ: "ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಗಂಡನ ಸೇವೆ ಮಾಡುವುದು ಹೆಂಡತಿಯ ಕರ್ತವ್ಯವಾಗಿದೆ. ಇದು ಸಮಯ ಸ್ಥಳ ಸಂದರ್ಭಗಳಿಗೆ ಅನುಗುಣವಾಗಿ ಬದಲಾಗಬಹುದು. ಉದಾ: ಗ್ರಾಮೀಣ ಮಹಿಳೆಯರು ಗಂಡನನ್ನು ಉಪಚರಿಸುವಂತೆ ಪಟ್ಟಣದ ಮಹಿಳೆಯರು ಗಂಡನನ್ನು ಉಪಚರಿಸುವುದಿಲ್ಲ. ಹಾಗೆಯೇ ವಿಶ್ವಾಸದಲ್ಲಿ ಪ್ರಬಲಳಾಗಿರುವವಳ ಸೇವೆಯಂತಿರುವುದಿಲ್ಲ ವಿಶ್ವಾಸ-ದಲ್ಲಿ ಬಲಹೀನಳಾದವಳ ಸೇವೆ."

ಜಿ. ಚೆನ್ನಾಗಿ ನೋಡಿಕೊಳ್ಳಬೇಕು: ಅಲ್ಲಾಹು ಹೇಳುತ್ತಾನೆ: "ಅವರಿಗೆ (ಗಂಡಂದಿರಿಗೆ) ಹೆಂಡತಿಯರ ಮೇಲೆ ಹಕ್ಕುಗ-ಳಿರುವಂತೆ ಅವರಿಗೂ (ಹೆಂಡತಿಯರಿಗೂ) ಗಂಡಂದಿರ ಮೇಲೆ ಹಕ್ಕುಗಳಿವೆ." (ಕುರ್‌ಆನ್ 2:228)

ಹೆಂಡತಿ ಒಳ್ಳೆಯ ಜೊತೆಗಾರ್ತಿಯಾಗಿರುವುದು, ಸೌಮ್ಯ ಮತ್ತು ಸುಶೀಲೆಯಾಗಿರುವುದು ಗಂಡನ ಹಕ್ಕಾಗಿದೆ. ಅವರಿಬ್ಬರೂ ತಮಗೆ ಸಾಧ್ಯವಾದಷ್ಟು ಅಲ್ಲಾಹನನ್ನು

ಭಯಪಟ್ಟು ಜೀವಿಸಬೇಕಾಗಿದೆ. ಇದರಿಂದ ಅವರ ದಾಂಪತ್ಯ ಜೀವನವು ಸಂತೋಷವಾಗಿರುವುದರಲ್ಲಿ ಸಂಶಯವಿಲ್ಲ.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees Mangalore